ಅಧ್ಯಕ್ಷರು: ಪುನರ್‌ವಿಮರ್ಶೆ ಮಾಡತಕ್ಕಂಥ ಅಗತ್ಯವಿಲ್ಲ. ತಾವು ಬೇಡಿಕೆಯ ಮೇಲೆ ಚರ್ಚೆ ಮಾಡಬಹುದು. ಎಲ್ಲಾ ಬೇಡಿಕೆಗಳು ಇವತ್ತು ಅಜೆಂಡಾದಲ್ಲಿದ್ದಾವೆ.

ಶ್ರೀ ಎಂ.ಪಿ. ಪ್ರಕಾಶ್: ಅವರು ಕಿತ್ತೂರ್‌ರವರ ಉದಾಹರಣೆಯನ್ನು ಹೇಳಿದರು. ಬಸವಲಿಂಗಪ್ಪನವರ ಉದಾಹರಣೆಯನ್ನು ಹೇಳಿದರು. ನಿವೃತ್ತ ಪೊಲೀಸ್ ಅಧಿಕಾರಿ ದಿನಕರ್‌ರವರು ಗುರುತರವಾದ ಆಪಾದನೆಯನ್ನು ಮಾಡಿ ಪುಸ್ತಕವನ್ನೇ ಬರೆದರು. ಇಡೀ ಪ್ರಪಂಚದಲ್ಲಿ ಇದರ ಬಗೆ ಚರ್ಚೆಯಾಯಿತು. ಆದರೂ ಕೂಡ ಯಾರೂ ಅವರ ಮೇಲೆ ಕ್ರಮ ಕೈಗೊಳ್ಳಲಿಲ್ಲ. ಕಿತ್ತೂರ್‌ರವರ ಬಗ್ಗೆ ಹೇಳುತ್ತಿದ್ದಾರೆ. ಆದರೆ ನಿವೃತ್ತ ಪೊಲೀಸ್ ಅಧಿಕಾರಿ ದಿನಕರ್‌ರವರು ನಿರ್ದಿಷ್ಟ ಆಪಾದನೆಗಳನ್ನು ನಿರ್ದಿಷ್ಟವಾದ ದಾಖಲೆಗಳ ಮೂಲಕ ಪುಸ್ತಕವನ್ನೇ ಬರೆದರು. ಆದರೂ ಕೂಡ ಅವರ ಮೇಲೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಕ್ರಮವನ್ನು ಕೈಗೊಳ್ಳದೆ ಇರತಕ್ಕಂಥದ್ದು ನಾವು ಕ್ರಮ ಕೈಗೊಳ್ಳುತ್ತೇವೆ. ಅದಕ್ಕೆ ಕಾಲಾವಕಾಶಬೇಕು.

ಅಧ್ಯಕ್ಷರು: ಬೇಡಿಕೆ ಮೇಲೆ ಚರ್ಚೆಗೆ ಅವಕಾಶ ಇದೆ ಮಾತನಾಡಿ, ನಿಮ್ಮ ವಿಷಯವನ್ನು ಪ್ರಸ್ತಾಪ ಮಾಡಬಹುದು.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾಗಿ ಘೋಷಣೆಗಳನ್ನು ಕೂಗುತ್ತಿದ್ದರು)

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು:

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2004ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಕರ್ನಾಟಕ ಸರ್ಕಾರದ (ಜಿಲ್ಲಾ ಪಂಚಾಯಿತಿಗಳು) ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

5. ವಿತ್ತೀಯ ಕಾರ್ಯಕಲಾಪಗಳು:

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ: 18 ರಿಂದ 25ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತೇನೆ."